
# ಕಥೋಪದೇಶ

ಶ್ರೀರಾಮಕೃಷ್ಣರು ಹೇಳಿದ ಕಥೆ

## ಬಪ್ಪುದು ತಪ್ಪುದು



ಬುದ್ಧಿವಂತನು ಗುಡ್ಡೆ ತಲೆಯಲಿ ಚಿಕ್ಕ ಗುಡಿಸಲ ಕಟ್ಟಿದ
ಬೆವರು ಸುರಿಸುತ ಮಣ್ಣ ಕಲಸುತ ಅಲ್ಲೆ ವಾಸಿಸತೊಡಗಿದ ||೧||

ಕೆಲವು ದಿನಗಳ ಬಳಿಕ ಬೀಸಿತು ಬಲದ ಸುಂಟರ ಗಾಳಿಯು
ಮುರುಕು ಗುಡಿಸಲನಡಿಯು ಗುಡುಗಿತು ಮುರಿದು ಗಡಗಡವಾಯಿತು ||೨||

ಹೆದರಿ ಗುಡಿಸಲನುಳಿಸಲೋಸುಗ ಬೇಡಿಕೊಂಡನು ವಾಯುವ
"ದೇವ ರಕ್ಷಿಸು, ತೋರು ಕರುಣೆಯ, ಉಳಿಸು ನನ್ನೀ ವಾಸವ" ||೩||

ಗಾಳಿ ನಿಲ್ಲದು ಗುಡಿಸಲುಳಿಯದು ಎಂಬ ಸ್ಥಿತಿ ಮುಂದರಿಯಿತು
ಒಡನೆ ಯೋಚನೆ ತಳೆದು ಹೇಳಿದ "ಮನೆಯು ಮಗ ಮಾರುತಿಯದು" ||೪||

ಆಗ ಗಾಳಿಯು ಜೋರು ಬೀಸಲು, ಕೊನೆಗೆ ಪ್ರಾರ್ಥನೆ ಗೈದನು
"ಇದುವೆ ಮನೆ ಶ್ರೀರಾಮ ನೆಲಸಿಹ, ಈಗಲಾದರು ಬಾಕಿಡು" ||೫||

ಎಲ್ಲ ಪ್ರಾರ್ಥನೆ ಶೂನ್ಯವಾಯಿತು, ಗುಡಿಸಲುರುಳಿತು, ಒಡೆಯಿತು
ಜೀವ ಕೈಯಲಿ ಹಿಡಿದು ಓಡುತ "ಭೂತ ಗುಡಿಯಿದು" ಹಳಿದನು ||೬||

ದೇವರಿಚ್ಛೆಗೆ ಜಗದ ನೃತ್ಯವು ನಮಗೆ ಇಲ್ಲಧಿಕಾರವು
ಎಲ್ಲ ಚಿಂತೆಯ ತೊರೆದು ದೇವರ ಧ್ಯಾನದಲ್ಲೀ ಮನವಿಡು ||೭||

ಪದ್ಯಾನುವಾದ : ಡಾ. ಮಧ್ವ ಶಾಮಭಟ್ಟ
ಕಲೆ : ಪುರುಷೋತ್ತಮ ಕಾರಂತ